ಹೆದರಬೇಡಿ' ಎಂದೆವು.

ಎಷ್ಟು ದಿನ ಈ ತರಬೇತಿ ಪಡೆಯಬೇಕು? ಶ್ರವಣ ತರಬೇತಿ ಪಡೆದ ತಕ್ಷಣವೇ ನಮ್ಮ ಮಗು ಕೇಳಿಸಿಕೊಂಡು ಅರ್ಥ ಮಾಡಿಕೊಂಡು ಮಾತನಾಡುತ್ತದೆಯೆ?– ಪ್ರಶ್ನೆಗಳ ಮೇಲೆ ಪ್ರಶ್ನೆಗಳು. ಈ ಮಗು ವಿಶೇಷ ಅಗತ್ಯವುಳ್ಳ ಮಗು. ಅದರ ನಿಜವಾದ ಸಾಮರ್ಥ್ಯ ಹೊರಬರಬೇಕಾದರೆ ಅದರ ವಿಶೇಷ ಅಗತ್ಯಗಳನ್ನು ಪೋಷಕರೇ ಪೂರೈಸಬೇಕು. ಮಗು ಕೇಳಿಸಿಕೊಂಡರೆ ಅಷ್ಟೇ ಸಾಕೇ? ಆ ಶಬ್ದಗಳ ಅರ್ಥ ತಿಳಿಯಬೇಡವೇ? ಭಾಷೆಯ ಪರಿಚಯ ಬೇಡವೇ?

ಇಂತಹ ಮಕ್ಕಳಿಗೆ ಭಾಷೆಯ ಗ್ರಹಿಕೆ, ಪದಗಳ ಸ್ಪಷ್ಟ ಉಚ್ಚಾರದ ಅಗತ್ಯವಿದೆ. ಅದಕ್ಕಾಗಿ ನಮ್ಮ ಸಂಸ್ಥೆಯಲ್ಲೇ ದೊರೆಯುವ ಭಾಷೆಯ ಮತ್ತು ಮಾತಿನ ತರಬೇತಿಯನ್ನು ಮಗುವಿಗೆ ಕೊಡಿಸಬೇಕಾಗುತ್ತದೆ. ತುಂಬಾ ತಾಳ್ಮೆ ವಹಿಸಿ ವರ್ಷಗಳ ಕಾಲ ಮಗುವಿಗೆ ತರಬೇತಿ ನೀಡಬೇಕು. ಶಾಲಾ ಹಂತದಲ್ಲಿರುವ ಮಗುವಾದರೆ, ಅದರ ಶಿಕ್ಷಣವೂ ಜೊತೆಗೇ ಸಾಗಬೇಕು. ಮುಂದೆ ಸಾಮಾನ್ಯ ಮಕ್ಕಳಂತೆ ಸಾಮಾನ್ಯ ಶಾಲೆಯಲ್ಲಿ ಆ ಮಗು ಕಲಿಯಲು ಪೂರ್ವತಯಾರಿಗಾಗಿ ಪ್ರಿ–ಸ್ಕೂಲ್ ತರಬೇತಿ ನೀಡಬೇಕಾಗುತ್ತದೆ. ಈ ಎಲ್ಲಾ ಕಾರ್ಯಗಳನ್ನು ಧೃಡವಿಶ್ವಾಸದಿಂದ ಮಾಡಲು ಪೋಷಕರು ಸಿದ್ಧರಾಗಿ ಬರಬೇಕು. ಇಲ್ಲವಾದಲ್ಲಿ ಮಗುವಿನ ಪ್ರಗತಿ ಅಸಾಧ್ಯ.

ಅಂದ ಹಾಗೆ ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲೇ ಈ ಕಿವುಡುತನ ಮತ್ತು ಮಾತು ಬಾರದ ಸಮಸ್ಯೆ ಉಂಟಾಗುತ್ತದೆ? ಕೆಲವು ಕಾರಣಗಳನ್ನು ಹೀಗೆ ಪಟ್ಟಿ ಮಾಡಬಹುದು:

- ರಕ್ತಸಂಬಂಧದಲ್ಲಿ, ಹತ್ತಿರದ ಸಂಬಂಧಿಗಳನ್ನು ಮದುವೆ ಆದರೆ ಮಕ್ಕಳಿಗೆ ಈ ಸಮಸ್ಯೆ ಬರಬಹುದು.
- ಗರ್ಭಿಣಿಯಾಗಿದ್ದಾಗ ಸರಿಯಾದ ಪೋಷಕಾಂಶ ಇಲ್ಲದ, ಸಮರ್ಪಕ ಆಹಾರ ಸೇವಿಸದಿದ್ದರೆ ತೊಂದರೆ ಬರಬಹುದು.
- ಹಿರಿಯರ ವಂಶವಾಹಿಗಳಿಂದ (ಅನುವಂಶೀಯತೆ) ಬರಬಹುದು.
- ಹೆರಿಗೆಯ ಸಂದರ್ಭದಲ್ಲಿ ಅಥವಾ ಹೆರಿಗೆಯ ನಂತರದಲ್ಲಿ ಉಂಟಾಗುವ ತೊಂದರೆಗಳಿಂದ ಬರಬಹುದು.
- ಕೆಲವು ನಿರ್ದಿಷ್ಟ ಔಷಧಿಗಳ ಸೇವನೆಯ ಅಡ್ಡ ಪರಿಣಾಮಗಳು ಆಗಿರಬಹುದು.
- ಅತಿ ಹೆಚ್ಚು ಶಬ್ದಮಾಲಿನ್ಯ ಹೊಂದಿರುವ ಸ್ಥಳಗಳಲ್ಲಿ ನಿರಂತರವಾಗಿ ಕಾರ್ಯ ನಿರ್ವಹಿಸುವುದರಿಂದ ಆಗಬಹುದು.

ಅಲಿಷಾಳ ತಂದೆ ಕೂಡಾ ಸಂಬಂಧದಲ್ಲಿ ಮದುವೆ ಆಗಿದ್ದ. ತನ್ನ ಅಕ್ಕನ ಮಗಳನ್ನೇ ಆತ ಮದುವೆಯಾಗಿದ್ದ. ಆದರೆ ವೈದ್ಯರ ಜೊತೆಗೆ ಇಬ್ಬರೂ ಮಾಡಿದ ಸಮಾಲೋಚನೆ ಫಲ ನೀಡಿತ್ತು. ಕೆಲವೇ ದಿನಗಳಲ್ಲಿ ಲಗೇಜಿನ ಸಮೇತ ಮಗುವನ್ನು ಕರೆದುಕೊಂಡು ಮೈಸೂರಿಗೆ ಬಂದೇಬಿಟ್ಟರು. ಸಂಸ್ಥೆಯ ಧರ್ಮಶಾಲೆಯಲ್ಲಿ ತಾಯಿಯೊಡನೆ ಮಗುವನ್ನು ಬಿಟ್ಟು ಧೈರ್ಯ ಹೇಳಿದ ಅಪ್ಪ, ಸಕಾಲಕ್ಕೆ ಎಲ್ಲ ನೆರವು ಒದಗಿಸುವುದಾಗಿ ಹೇಳಿ ಊರಿಗೆ ಹೊರಟು ಹೋದ.

ಮಗುವಿನ ತರಬೇತಿಯ ಅವಧಿಯಲ್ಲಿ ತಂದೆ, ತಾಯಿ, ಕುಟುಂಬದವರ ತ್ಯಾಗ ಸಾಕಷ್ಟು ಬೇಕಾಗುತ್ತದೆ. ಅಲಿಷಾ ಶ್ರವಣ ತರಬೇತಿ ಪಡೆಯುವ ಆರಂಭದಲ್ಲಿ ತಾಯಿಯ ತಳಮಳ ವರ್ಣಿಸಲಸಾಧ್ಯ. ಕುಕ್ಕರ್ ವಿಷಲ್ ಶಬ್ದ, ಬಾಗಿಲು ಬಡಿಯುವ ಶಬ್ದ ಹೀಗೆ ಹಲವಾರು ಶಬ್ದಗಳ ಪ್ರಯೋಗ ಮಾಡುತ್ತಾ ಆಲಿಷಾ ಮೊದಲ ಬಾರಿಗೆ ಸೂಕ್ತ ಪ್ರತಿಕ್ರಿಯೆ ನೀಡಿದಾಗ ಅಬ್ಬಾ ಎನಿಸಿತು. ನೀರು ಬಾರದ ಬಾವಿಯಲ್ಲಿ ಧುತ್ತೆಂದು ಒಮ್ಮೆ ನೀರಿನ ಗುಳ್ಳೆಗಳು ಏಳುವಾಗ ಆಗುವ ಸಂತಸದಷ್ಟು ಆನಂದ ಆ ತಾಯಿಗೆ ಉಂಟಾಗಿತ್ತು. ಮಗು ಶಬ್ದಗಳು ಬರುವ ಕಡೆಗೆ ತಿರುಗಿ ತಿರುಗಿ ಪ್ರತಿಕ್ರಿಯೆ ನೀಡುತ್ತಿದ್ದರೆ ಆ ತಾಯಿಗೆ ಸ್ವರ್ಗಾನಂದ.

**42ನೇ ಪುಟ ನೋಡಿ**

